ಓಂ ಶಾಂತಿ, ಬಾಪ್ ದಾದಾ ಅವ್ಯಕ್ತ ಮುರಳಿ 06-12-1969.

(ओम शान्ति, बापदादा. अव्यक्त मुरली 06-12-1969)

*ಸರಳ ಸ್ವಭಾವದಿಂದ ಬುದ್ಧಿಯನ್ನು ವಿಶಾಲ ಮತ್ತು ದೂರಾದೇಶಿ ಮಾಡಿಕೊಳ್ಳಿ*

(सरल स्वभाव से बुद्धि को विशाल और दूरांदेशी बनाओ)

ಇಂದಿನ ಸಭೆಯಲ್ಲಿ ಯಾವ ವಿಶೇಷ ಸುಗಂಧ ಮತ್ತು ಆಕರ್ಷಣೆಯಿದೆ? ಎಲ್ಲರ ಸ್ನೇಹವಂತೂ ಇದೆ. ತಮ್ಮನ್ನು ಏಕೆ ಕರೆಯಲಾಗಿದೆ? ಯಾರೆಲ್ಲಾ ಬಂದಿರುವರೋ ಅವರು ವಾಪಸ್ಸು ಹೋಗಲು ಸಿದ್ಧರಾಗಿ ಬಂದಿದ್ದಾರೆ ಎಂದು ತಿಳಿಯಿರಿ, ಸದಾ ಸಿದ್ಧರು ಸದಾ ಸಿದ್ಧರಾಗಿರುತ್ತಾರೆ(ಎವರೆಡಿ). ಕರೆ ಬಂದ ತಕ್ಷಣ ಒಂದು ಕ್ಷಣದಲ್ಲಿ ತಮ್ಮದೆಲ್ಲವನ್ನೂ ಸಮಾವೇಶ ಮಾಡಬಲ್ಲರು ಮತ್ತು ಪ್ರಾಯೋಗಿಕವಾಗಿ ನೋಡಿದಿರಲ್ಲವೇ ನಾಟಕದ ಕರೆಗೆ ಎಷ್ಟು ಸಮಯ ಬೇಕಾಯಿತು? ಒಂದು ಕಡೆಗೆ ಸಮಾವೇಶಗೊಳಿಸುವುದು ಇನ್ನೊಂದು ಕಡೆಗೆ ಹಾರುವುದು. ಈ ಎರಡು ದೃಶ್ಯಗಳನ್ನು ನೋಡಿದಿರಿ-ಇದು ನಾಟಕದಲ್ಲಿ ಏಕಾಯಿತು? ಕಲಿಸಲು ಹಾಗಾಯಿತು, ಹೀಗೆ ಸದಾ ಸಿದ್ಧರಾಗಬೇಕು. ಈಗ ಸದಾಸಿದ್ಧರ ಸಾಲು ಶುರುವಾಗಿದೆ. ಈ ಸಾಲಿನಲ್ಲಿ ಯಾರದಾದರೂ ನಂಬರ್ ಬರಬಹುದು. ಎಲ್ಲರ ಸಂಕಲ್ಪದಲ್ಲಿರುವುದು ಎಂದೂ ಆಗುವುದಿಲ್ಲ. ಆಗುವುದೆಲ್ಲವೂ ಅನಾಯಾಸವಾಗಿಯೇ. ಈ ಬ್ರಾಹ್ಮಣ ಕುಲದ ರೀತಿ-ನೀತಿಗಳು ಶುರುವಾಗಿವೆ. ಇವೂ ನಾಟಕದಲ್ಲಿ ಏಕೆ ಇವೆ ಎಂಬುದರ ರಹಸ್ಯ ಬಹಳ ಗುಪ್ತವಾಗಿದೆ. ತಕ್ಷಣ ಸಮಾವೇಶಗೊಳಿಸಿ ಹಾರುವಂತಹ ಪುರುಷಾರ್ಥವನ್ನು ಮೊದಲಿನಿಂದಲೇ ಮಾಡಿ . ಸಮಾವೇಶಗೊಳಿಸುವ ಶಕ್ತಿ ಯಾರಲ್ಲಿ ಇರಲು ಸಾಧ್ಯ? ಯಾರು ಸರಳ ಸ್ವಭಾವದವರೋ ಅವರಲ್ಲಿ ಸಹಜವಾಗಿ ಬರಲು ಸಾಧ್ಯ. ಅಂತಹವರು ಎಲ್ಲರಿಗೂ ಸಹಯೋಗಿಯಾಗಿರುವರು. ಯಾರು ಎಲ್ಲರ ಸ್ನೇಹಿಯಾಗಿರುವರೋ ಅವರಿಗೆ ಎಲ್ಲರಿಂದ ಸಹಯೋಗ ಪ್ರಾಪ್ತಿಯಾಗುವುದು. ಆದ್ದರಿಂದ ಎಲ್ಲ ಮಾತುಗಳನ್ನು ಎದುರಿಸುವುದು ಅಥವಾ ಸಮಾವೇಶಗೊಳಿಸುವುದನ್ನು ಸಹಜ ಮಾಡಬಹುದು ಮತ್ತು ಯಾರು ಎಷ್ಟು ಸರಳ ಸ್ವಭಾವದವರೋ ಅಷ್ಟು ಮಾಯೆ ಕಡಿಮೆ ಎದುರಿಸಲು ಬರುವುದು. ಅವರು ಎಲ್ಲರಿಗೂ ಪ್ರಿಯರಾಗಿರುವರು. ಸರಳ ಸ್ವಭಾವದವರಲ್ಲಿ ವ್ಯರ್ಥ ಸಂಕಲ್ಪ ನಡೆಯುವುದಿಲ್ಲ. ಸಮಯ ವ್ಯರ್ಥವಾಗಿ ಹೋಗುವುದಿಲ್ಲ. ವ್ಯರ್ಥ ಸಂಕಲ್ಪವಿಲ್ಲದ ಕಾರಣ ಅವರ ಬುದ್ಧಿ ವಿಶಾಲ ಮತ್ತು ದೂರಾದೇಶಿಯಾಗಿರುವುದು. ಆದ್ದರಿಂದ ಅವರ ಮುಂದೆ ಯಾವುದೇ ಸಮಸ್ಯೆ ಬರುವುದಿಲ್ಲ. ಎಷ್ಟು ಸರಳತೆಯೋ ಅಷ್ಟೇ ಸ್ವಚ್ಛತೆಯಿರುವುದು. ಸ್ವಚ್ಛತೆ ಎಲ್ಲರನ್ನು ತಮ್ಮ ಕಡೆಗೆ ಆಕರ್ಷಿಸುವುದು. ಸ್ವಚ್ಛತೆಯೆಂದರೆ ಸತ್ಯತೆ ಮತ್ತು ಶುದ್ಧತೆ, ತಮ್ಮ ಸ್ವಭಾವವನ್ನು ಸರಳ ಮಾಡಿಕೊಂಡಾಗ ಇವೆರಡೂ ಇರಲು ಸಾಧ್ಯ. ಸರಳ ಸ್ವಭಾವದವರು ಬಹುರೂಪಿಯಾಗಲು ಕೂಡಾ ಸಾಧ್ಯ. ಕೋಮಲ ವಸ್ತುವನ್ನು ಯಾವುದಾದರೂ ರೂಪದಲ್ಲಿ ತರಬಹುದು. ಈಗ ಚಿನ್ನವಾಗಿದ್ದೀರಿ. ಆದರೆ ಈಗ ಚಿನ್ನವನ್ನು ಅಗ್ನಿಯಲ್ಲಿ ಕರಗಿಸಿ, ಆಗ ಅದರ ಆಕಾರವನ್ನು ಬದಲಿಸಬಹುದು (mold). ಈ ಕೊರತೆಯ ಕಾರಣದಿಂದ ಸೇವೆಯಲ್ಲಿ ಸಫಲತೆ ಕಡಿಮೆಯಾಗುತ್ತದೆ. ತಮ್ಮನ್ನು ಬದಲಾಯಿಸಿಕೊಳ್ಳಲು (mold) ಭಟ್ಟಿಯಲ್ಲಿ ಬಂದಿರುವಿರಿ. ಒಂದಾಗಿದೆ ತಿರುಗಿಸುವಶಕ್ತಿ (turn) ಮತ್ತೊಂದು ನಿಲ್ಲಿಸುವಶಕ್ತಿ (brake). ಎಷ್ಟು ಸಮಯದಲ್ಲಿ ತಿರುಗಿಸುವುದು? ತಿರುಗಿಸುವುದು ಬರುತ್ತದೆ ಆದರೆ ಅಲ್ಲಲ್ಲಿ ಬಹಳ ಸಮಯ ಬೇಕಾಗುತ್ತದೆ. ಸಮಯ ತೆಗೆದುಕೊಳ್ಳದಂತಹ ಸಂಕಲ್ಪ ಮಾಡಬೇಕು ಮತ್ತು ಸಂಕಲ್ಪ ಮಾಡಿದಾಕ್ಷಣ ಸಿದ್ಧವಾಗಬೇಕು.

ಭಟ್ಟಿಯಿಂದ ಪ್ರತಿ ಸಂಕಲ್ಪ, ಶಬ್ದ ಸಿದ್ದಿಯಾಗುವಂತೆ ತಯಾರಾಗಿ ಹೋಗಬೇಕು. ಅಲ್ಲಿ ಜನ ರಿದ್ಧಿ-ಸಿದ್ಧಿ ಪ್ರಾಪ್ತಿ ಮಾಡಿಕೊಳ್ಳುತ್ತಾರೆ ಆದರೆ ಇಲ್ಲಿ ಯೋಗದ ರಿದ್ಧಿ-ಸಿದ್ಧಿಯಿದೆ. ನೆನಪಿನ ರಿದ್ಧಿ-ಸಿದ್ಧಿ ಏನಾಗಿದೆ ಅದನ್ನು ಕಲಿಯಬೇಕು. ಯಾರು

ಸಿದ್ಧಿಯನ್ನು ಪಡೆದುಕೊಳ್ಳುವರೋ ಅವರ ಸಂಕಲ್ಪ, ಶಬ್ದ ಮತ್ತು ಪ್ರತಿ ಕರ್ಮ ಸಿದ್ಧವಾಗುತ್ತದೆ. ಒಂದು ಸಂಕಲ್ಪವೂ ವ್ಯರ್ಥವಾಗಿರುವುದಿಲ್ಲ. ಯಾವ ಸಂಕಲ್ಪಗಳು ಸಿದ್ಧವಾಗಬೇಕೋ ಅವುಗಳ ಸೃಜನವೇ ಆಗುವುದು. ಯಾರ ಒಂದು ಸಂಕಲ್ಪವೂ ಸಿದ್ಧಿಯಾಗದೆ ಇರುವುದಿಲ್ಲವೋ ಅವರಿಗೆ ಸೇವೆಗೆ-ಯೋಗ್ಯರು (service-able) ಎಂದು ಹೇಳಲಾಗುತ್ತದೆ. ಅಥವಾ ಸಿದ್ಧವಾಗದಿರುವಂತಹ ಸಂಕಲ್ಪ ಬರಬಾರದು. ತಮ್ಮ ಒಂದೊಂದು ಸಂಕಲ್ಪದ ಬೆಲೆಯಿದೆ. ಆದರೆ ಯಾವಾಗ ತಮ್ಮ ಬೆಲೆ ಇಟ್ಟುಕೊಳ್ಳುವಿರೋ ಆಗ ಅನೇಕ ಆತ್ಮರು ತಮ್ಮ (ರತ್ನಗಳ) ಬೆಲೆ ಗುರುತಿಸುವರು. ಈ ಭಟ್ಟಿಯಿಂದ ಎಲ್ಲರ ಮುಖಗಳು ಚೈತನ್ಯ ಮ್ಯೂಸಿಯಮ್ (ಸಂಗ್ರಹಾಲಯ) ಆಗಿ ಹೋಗಬೇಕು. ಬಹಳ ಸಂಗ್ರಹಾಲಯಗಳನ್ನು ಮಾಡಿರುವಿರಿ ಆದರೆ ಈಗ ಒಬ್ಬೊಬ್ಬರು ತಮ್ಮ ಮುಖಗಳನ್ನು ಚೈತನ್ಯ ಮ್ಯೂಸಿಯಮ್ ಮಾಡಿಕೊಳ್ಳಬೇಕು. ಈ ಚೈತನ್ಯ ಮುಖಗಳ ಸಂಗ್ರಹಾಲಯದಲ್ಲಿ ಎಷ್ಟು ಚಿತ್ರಗಳಿವೆ? ಈ ಮುಖಗಳ ಸಂಗ್ರಹಾಲಯದಲ್ಲಿ ಯಾವ-ಯಾವ ಚಿತ್ರಗಳನ್ನು ಜೋಡಿಸುವಿರಿ? ಸಂಗ್ರಹಾಲಯದಲ್ಲಿ ಮೊದಲು ಚಿತ್ರಗಳನ್ನು ಜೋಡಿಸುತ್ತಾರೆ. ನಂತರ ಶೃಂಗರಿಸುತ್ತಾರೆ ನಂತರ ಉದ್ಘಾಟನೆ ಮಾಡಲಾಗುತ್ತದೆ. ಆಮೇಲೆ ಅಭಿಪ್ರಾಯ ಪಡೆಯುವುದು. ತಮ್ಮ ಈ ಚೈತನ್ಯ ಸಂಗ್ರಹಾಲಯದಲ್ಲಿ ಮೂರು ಮುಖ್ಯ ಚಿತ್ರಗಳಿವೆ. ಭೃಕುಟಿ, ನಯನ ಮತ್ತು ಮುಖ. ಇವುಗಳ ಮುಖಾಂತರ ತಮ್ಮ ಸ್ಮೃತಿ, ವೃತ್ತಿ, ದೃಷ್ಟಿ ಮತ್ತು ಮಾತುಗಳು ಹೇಗೆಂದು ಗೊತ್ತಾಗುವವು. ಹೇಗೆ ಮುಖ್ಯ ಮೂರು ತ್ರಿಮೂರ್ತಿ, ಲಕ್ಷ್ಮೀನಾರಾಯಣ ಮತ್ತು ಏಣಿಯ ಚಿತ್ರಗಳು. ಇದರಲ್ಲಿ ಎಲ್ಲಾ ಜ್ಞಾನ ಬರುತ್ತದೆ. ಅದರಂತೆಯೇ ಈ ಮುಖದಲ್ಲಿ ಈ ಚಿತ್ರ ಅನಾದಿಯಾಗಿದೆ. ದೂರದಿಂದಲೇ ಈ ಚಿತ್ರಗಳ ಶೃಂಗಾರ ತಮ್ಮೆಡೆಗೆ ಆಕರ್ಷಿಸುವಂತೆ ಇರಬೇಕು.  ತಾವು ಸಂಗ್ರಹಾಲಯವನ್ನು ಮಾಡುವಾಗ ಚಿತ್ರಗಳನ್ನು ದೂರದಿಂದಲೇ ಆಕರ್ಷಿಸುವಂತೆ ಪ್ರಯತ್ನಪಟ್ಟು ಶೃಂಗಾರ ಮಾಡುತ್ತೀರಿ, ತಾವೆಲ್ಲರೂ ಯಾರನ್ನು ಕರೆಯುವ ಅವಶ್ಯಕತೆಯೂ ಇಲ್ಲದಂತೆ ತಮ್ಮ ಸಂಗ್ರಹಾಲಯವನ್ನು ಸಿದ್ಧ ಮಾಡಿಕೊಳ್ಳಬೇಕು. ಏನೆಲ್ಲವನ್ನು ಕೇಳಿರುವಿರೋ ಅದನ್ನು ಆಳವಾಗಿ ಯೋಚಿಸಿ ಒಂದೊಂದು ಕಣದಲ್ಲಿ ಸಮಾವೇಶಗೊಳಿಸಿ. ಯಾರು ಎಷ್ಟು ಆಳವಾಗಿ ಕೇಳಿರುವರೋ ಅಷ್ಟನ್ನು ತಮ್ಮ ವ್ಯವಹಾರದಲ್ಲಿ ತಂದಿರುವಿರಾ? ಆ ಸಂಸ್ಕಾರಗಳನ್ನು ಪ್ರತ್ಯಕ್ಷ ಮಾಡಲು ಒಂದೊಂದು ಮಾತಿನ ಆಳಕ್ಕೆ ಹೋಗಿ, ತಮ್ಮ ಒಂದೊಂದು ರೋಮದಲ್ಲಿ ಆ ಸಂಸ್ಕಾರಗಳನ್ನು ತುಂಬಿಕೊಳ್ಳಿ. ಯಾವುದೇ ವಸ್ತುವನ್ನು ಎಲ್ಲಿಯಾದರೂ ಸಮಾವೇಶಗೊಳಿಸಬೇಕಾದರೆ ಏನು ಮಾಡುವರು? ಒಂದು ಆಳಕ್ಕೆ ಹೋಗುವುದು ಮತ್ತು ಒಳಗೆ ಹೋಗುವಂತೆ ಬಡಿಯುವುದು, ಬಡಿಯುವುದು ಎಂದರೆ ಪ್ರತಿಯೊಂದು ಮಾತನ್ನು ಸೂಕ್ಷ್ಮ ಮಾಡುವುದು. ಈ ಭಟ್ಟಿಯಲ್ಲಿ ಸಂಸ್ಕಾರಗಳನ್ನು ಪ್ರತ್ಯಕ್ಷ ರೂಪದಲ್ಲಿ ತರುವ ಪ್ರತಿಜ್ಞೆ ಮಾಡಿ ಹೋಗಿ. ಎಷ್ಟು ತಂದೆಯನ್ನು ಪ್ರತ್ಯಕ್ಷ ಮಾಡುವಿರೋ ಅಷ್ಟು ಸ್ವಯಂ ಅನ್ನು ಪ್ರತ್ಯಕ್ಷ ಮಾಡುವಿರಿ. ತಂದೆಯನ್ನು ಪ್ರತ್ಯಕ್ಷ ಮಾಡುವುದರಿಂದ ತಮ್ಮ ಪ್ರತ್ಯಕ್ಷತೆ ತಂದೆಯ ಜೊತೆಗಿದೆ. ಹೀಗೆ ತಯಾರಾಗುವುದು  ಮತ್ತು ತಯಾರು ಮಾಡುವುದು, ತಿಳಿಯಿತೇ.

ಈ ಸಂಘಟನೆಯಲ್ಲಿ ಏನು ಬೇಕೋ ಅದನ್ನು ಮಾಡುವಂತಹ ಶಕ್ತಿಯಿದೆ. ಕೇವಲ ಸಂಕಲ್ಪ ಮಾಡಿದರೆ ಸೃಷ್ಟಿ ಬದಲಾಗುವುದು. ಇಂತಹ ಶಕ್ತಿಶಾಲಿ ಆತ್ಮರಿದ್ದಾರೆ. ಆದರೆ ಈಗ ಯಾವ ಶಕ್ತಿಶಾಲಿ ಸಂಕಲ್ಪವನ್ನು ಮಾಡಬೇಕು? ಅದನ್ನು ಮತ್ತೊಮ್ಮೆ ರಿಫ್ರೆಶ್ ಮಾಡಿಕೊಳ್ಳಿ.

ಅಂತಿಂಥವರು ಕಾಲಿಡಲು ಸಾಧ್ಯವಿಲ್ಲವೆಂದು ಈ ಮಧುಬನಕ್ಕೆ ಗಾಯನವಿದೆ. ಮಧುಬನವಾಗಿದೆ ಸೌಭಾಗ್ಯದ ರೇಖೆ. ಅದರೊಳಗೆ ಯಾರೂ ಕಾಲಿಡಲು ಸಾಧ್ಯವಿಲ್ಲ. ಇದು ಸ್ನೇಹದ ರೇಖೆಯಾಗಿದೆ ಇದರೊಳಗೆ ಬಾಪ್ ದಾದಾ ನಿವಾಸ ಮಾಡುತ್ತಾರೆಂದು, ಇದರೊಳಗೆ ತಮ್ಮ ತಲೆ ಕತ್ತರಿಸಿಟ್ಟರೂ ಯಾರೂ ಬರುವುದಿಲ್ಲವೆಂದು ತಮ್ಮೆಲ್ಲರಿಗೂ ಬಾಪ್ ದಾದಾ ತಿಳಿಸುತ್ತಾರೆ. ಸಾಕಾರ ರೂಪದಲ್ಲಿ ಸ್ನೇಹ ಸಿಗುವುದು ಕಡಿಮೆ ಮಾತಲ್ಲ. ಮುಂದೆ ಅದಕ್ಕಾಗಿ ಅಳುವವರನ್ನು ನೋಡಿದಾಗ ತಮಗೆ

ಅದರ ಬೆಲೆ ಗೊತ್ತಾಗುವುದು. ಅತ್ತು ತಮ್ಮ ಚರಣಗಳ ಮೇಲೆ ಬೀಳುವರು, ಸ್ನೇಹದ ದಾಹದಿಂದ ಒಂದು ಹನಿಗಾಗಿ ಚರಣಗಳ ಮೇಲೆ ಬೀಳುವರು, ಅವರು ಒಂದು ಹನಿಯ ದಾಹವುಳ್ಳವರು, ತಾವು ಸ್ನೇಹದ ಸಾಗರನನ್ನು ತಮ್ಮಲ್ಲಿಯೇ ಸಮಾವೇಶಗೊಳಿಸಿ ಕೊಂಡಿರುವರು. ಇಂತಹ ಸೌಭಾಗ್ಯ ಯಾರದಾಗಿರಲು ಸಾಧ್ಯ? ಸರ್ವ ಸಂಬಂಧಗಳ ಸುಖ, ರಸ ತಮ್ಮಲ್ಲಿ ತುಂಬಿದೆ. ಅದು ಬೇರೆ ಯಾರಲ್ಲಿಯೂ ಇರಲು ಸಾಧ್ಯವಿಲ್ಲ. ಆದ್ದರಿಂದ ನಾಟಕದಲ್ಲಿ ಇಷ್ಟು ಶ್ರೇಷ್ಠ ಭಾಗ್ಯವನ್ನು ಸದಾ ಸಮ್ಮುಖದಲ್ಲಿಟ್ಟುಕೊಳ್ಳಿ. ಸಮ್ಮುಖದಲ್ಲಿ ಇರುವುದರಿಂದ ಅದರ ಪ್ರತಿಫಲವನ್ನು ಕೊಡುವುದು ತಾನಾಗಿಯೇ ನೆನಪಿನಲ್ಲಿರುವುದು. ಒಳ್ಳೆಯದು.

ಅವ್ಯಕ್ತ ಮುರಳಿ 06-12-1979.

***ಸರಳ ಸ್ವಭಾವದಿಂದ ಬುದ್ಧಿಯನ್ನು ವಿಶಾಲ ಮತ್ತು ದೂರಾದೇಶಿ ಮಾಡಿಕೊಳ್ಳಿ***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸದಾ ಸಿದ್ಧ (ಎವರೆಡಿ).

2. ನಾನು ಒಂದು ಕ್ಷಣದಲ್ಲಿ ಸಮಾವೇಶಗೊಳಿಸಿ ಹಾರಬಲ್ಲ ಸರಳ ಸ್ವಭಾವಧಾರಿ.

3. ನಾನು ಎಲ್ಲರಿಂದಲೂ ಸಹಯೋಗವನ್ನು ಪಡೆಯುವ ಸ್ನೇಹಿ.

4. ನಾನು ಸರಳ ಸ್ವಭಾವದಿಂದ ಸತ್ಯತೆ, ಸ್ವಚ್ಛತೆ, ಶುದ್ಧತೆ ಮತ್ತು ಬಹುರೂಪಿಯಾಗಿ ತಯಾರಾಗಿದ್ದೇನೆ.

5. ನಾನು ತಿರುಗಿಸುವ ಶಕ್ತಿ(ಟರ್ನ್) ಮತ್ತು ಬ್ರೇಕ್ ಹಾಕುವ ಶಕ್ತಿಯಿಂದ ನನ್ನ ಪ್ರತಿ ಸಂಕಲ್ಪ ಮತ್ತು ಮಾತು ಸಿದ್ಧಿಯಾಗುವಂತಹ ಸಿದ್ಧಿ ಸ್ವರೂಪ.

6. ನಾನು ತಂದೆಯನ್ನು ಸಂಪೂರ್ಣವಾಗಿ ಪ್ರತ್ಯಕ್ಷ ಮಾಡಿದ್ದೇನೆ.

7. ನಾನು ಸಂಕಲ್ಪ ಮಾಡಿದರೆ ಸೃಷ್ಟಿ ಬದಲಾಗುವಂತಹ ಶಕ್ತಿಶಾಲಿಯಾಗಿದ್ದೇನೆ.

8. ನಾನು ಸರ್ವ ಸಂಬಂಧಗಳ ರಸದಿಂದ ಸಂಪನ್ನವಾಗಿದ್ದೇನೆ.